ವಿಜಯ ಕರ್ನಾಟಕ

### ಸಿಂಧಿ ಕಾಲೇಜು ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ತಜ್ಞರ ಸಲಹೆ

# ಉನ್ನತ ಹುದ್ದೆಗಳು ಮಹಿಳೆಯರಿಗೂ ಸಿಗಲಿ

■ **ವಿಕ ಸುದ್ದಿಲೋಕ** ಬೆಂಗಳೂರು

''ಶಿಕ್ಷಣ ಸೇರಿದಂತೆ ನಾನಾ ಕ್ಷೇತ್ರಗಳಲ್ಲಿರುವ ಉನ್ನತ ಹುದ್ದೆಗಳು ಮಹಿಳೆಯರಿಗೆ ಸಿಗುವಂತಾಗಲು ಸರಕಾರ ಸೂಕ್ತ ವಾತಾವರಣವನ್ನು ಕಲ್ಪಿಸಬೇಕು. ಅರ್ಹತೆ, ನಾಯಕತ್ವದ ಗುಣವಿರುವ ಮಹಿಳೆಯರಿಗೆ ಪುರುಷರು ನಿರ್ವಹಿಸುವ ಹುದ್ದೆಗಳು ಎಟಕುವಂತಾಗಬೇಕು. ಹೆಣ್ಣುಮಕ್ಕಳು ಎತ್ತರಕ್ಕೆ ಬೆಳೆಯಲು ಸಮಾಜ ಕೂಡ ಬೆಂಬಲ ಸೂಚಿಸಲಿ''

ಇದು ಸಿಂಧಿ ವಾಣಿಜ್ಯ ಕಾಲೇಜ್‌ನಲ್ಲಿ ಗುರುವಾರ ನಡೆದ 'ಶೈಕ್ಷಣಿಕ ಸಂಸ್ಥೆಗಳಲ್ಲಿ ಅವಕಾಶ ಹಾಗೂ ಸವಾಲುಗಳು' ವಿಷಯದ ಕುರಿತಾದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಪಾಲ್ಗೊಂಡಿದ್ದ ಮಹಿಳಾ ಪರಿಣತರಿಂದ ಕೇಳಿಬಂದ ಒಮ್ಮತದ ಅಭಿಪ್ರಾಯ. ''ಮಹಿಳೆಯರು ಉನ್ನತ ಹುದ್ದೆಗಳಿಗೆ ಏರಿ ಶೋಭೆ ತಂದಿ ದ್ದಾರೆ. ಕೌಶಲ, ಪರಿಪೂರ್ಣತೆ, ಯೋಜಿತ ಕಾರ್ಯಶೈಲಿ, ಜವಾಬ್ದಾರಿ ನಿಭಾವಣೆ, ವೃತ್ತಿ ಗೌರವದ ಮೂಲಕ ಅವರು ಗಮನ ಸೆಳೆದಿದ್ದಾರೆ. ಕುಟುಂಬ ಹಾಗೂ ಸಮಾಜದಲ್ಲಿರುವ ನಾನಾ ಅಡ್ಡಿಗಳನ್ನು ದಾಟಿ ಬರುವ ಮಾನಿನಿಯರ ಪ್ರತಿಭೆಗೆ ಮಾನ್ಯತೆ ಸಿಗುವಂತಾಗಬೇಕು,'' ಎಂಬ ಹಕ್ಕೊತ್ತಾಯ ಮಾಡಲಾಯಿತು.

**ದೊಡ್ಡ ಹುದ್ದೆಗೇರುವ ಅಡ್ಡಿ ನಿವಾರಿಸಿ:** ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ನಾಟಕ ಮುಕ್ತ ವಿವಿಯ ಮಾಜಿ ಕುಲಪತಿ ಡಾ. ಕೆ.ಸುಧಾ ರಾವ್ ''ದೇಶದಲ್ಲಿ ಮಹಿಳೆಯರು ನಾನಾ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸರಕಾರ ನೀತಿ ರೂಪಿಸಿದೆ. ಇದಕ್ಕೆ ಸೂಕ್ತ ವಾತಾವರಣವನ್ನು ಕೂಡ ಕಲ್ಪಿಸಲಾಗಿದೆ. ಆದರೆ, ಉನ್ನತ ಹುದ್ದೆಗಳನ್ನು ನೀಡುವ ವಿಷಯ ಬಂದಾಗ ಪುರುಷರನ್ನೇ ಆಯ್ಕೆ ಮಾಡಲಾಗುತ್ತಿದೆ. ಇದರಿಂದ ಮಹಿಳೆಯರು ನೀತಿ, ನಿರೂಪಣಾ ಸ್ಥಾನಕ್ಕೆ ಏರಲು ಸಾಧ್ಯವಾಗುತ್ತಿಲ್ಲ. ಈ ತಾರತಮ್ಯ ನಿವಾರಿಸಲು ಎಲ್ಲರೂ ಗಮನ ಹರಿಸಬೇಕಿದೆ,'' ಎಂದರು.



ಸಿಂಧಿ ವಾಣಿಜ್ಯ ಕಾಲೇಜಿನಲ್ಲಿ ಗುರುವಾರ ನಡೆದ ವಿಚಾರ ಸಂಕಿರಣವನ್ನು ಕರ್ನಾಟಕ ಮುಕ್ತ ವಿವಿಯ ಮಾಜಿ ಕುಲಪತಿ ಡಾ. ಕೆ. ಸುಧಾ ರಾವ್ ಉದ್ಘಾಟಿಸಿದರು. ರಾಮನ್ ಸಂಶೋಧನಾ ಸಂಸ್ಥೆಯ ಮುಖ್ಯ ಗ್ರಂಥಪಾಲಕಿ ಡಾ. ಬಿ.ಎಂ.ಮೀರಾ, ಜಿಟಿ ಶಿಕ್ಷಣ ಸಮೂಹದ ನಿರ್ದೇಶಕ ಡಾ. ಬಿ.ಜಿ.ಸತ್ಯಪ್ರಸಾದ್ ಹಾಜರಿದ್ದರು.

**ಪುರುಷರ ಲಾಬಿಗೆ ಉನ್ನತ ಹುದ್ದೆ:** ಬೆಂಗಳೂರಿನ ರಾಮನ್ ವಿಜ್ಞಾನ ಸಂಸ್ಥೆಯ ಮುಖ್ಯ ಗ್ರಂಥಪಾಲಕಿ ಡಾ. ಬಿ.ಎಂ. ಮೀರಾ ಮಾತನಾಡಿ ''ದೇಶದ ನಾನಾ ವಿಶ್ವವಿದ್ಯಾಲಯ, ಐಐಟಿ ಸಹಿತ ಉನ್ನತ ಸಂಸ್ಥೆಗಳ ಪ್ರಧಾನ ಹುದ್ದೆಗಳಲ್ಲಿ ಸಿಂಹಪಾಲು ಪುರುಷರಿಗೆ ಸಂದಿವೆ. ಬೆರಳೆಣಿಕೆಯಷ್ಟು ಮಾತ್ರ ಮಹಿಳೆಯರಿಗೆ ದೊರೆತಿದ್ದು, ಅವಕಾಶ, ಅರ್ಹತೆ ಇದ್ದರೂ, ಹೆಣ್ಣುಮಕ್ಕಳು ಹುದ್ದೆಗಳಿಂದ ವಂಚಿತರಾಗುತ್ತಿದ್ದಾರೆ. ಉನ್ನತ ಹುದ್ದೆಗಳಿಗೆ ನೇಮಿಸುವ ವೇಳೆ ಲಿಂಗ ತಾರತಮ್ಯ ಸಲ್ಲದು,'' ಎಂದರು.

## 100 ಪ್ರತಿನಿಧಿಗಳು ಭಾಗಿ

ವಿಚಾರ ಸಂಕಿರಣದಲ್ಲಿ ಕರ್ನಾಟಕವಲ್ಲದೆ ನೆರೆಯ ಆಂಧ್ರ, ತೆಲಂಗಾಣ, ತಮಿಳುನಾಡು, ಪಾಂಡಿಚೇರಿ ಮುಂತಾದ ರಾಜ್ಯಗಳಿಂದ ಒಟ್ಟು 100 ಪ್ರತಿನಿಧಿಗಳು ಭಾಗಿಯಾಗಿದ್ದರು. ಹಲವು ಪ್ರತಿನಿಧಿಗಳು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಸಿಂಧಿ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಎಸ್.ಶ್ರೀಕಂಠ, ಉಪ ಪ್ರಾಂಶುಪಾಲ ಡಾ. ಎಸ್.ಅನಿಲ್‌ಕುಮಾರ್ ಹಾಜರಿದ್ದರು.

## ಪರಿಶ್ರಮ ಅಗತ್ಯ

''ಹೊಸ ಪೀಳಿಗೆಯ ಸಮಾಜದಲ್ಲಿ ಹೆಣ್ಣುಮಕ್ಕಳು ಎತ್ತರದ ಸ್ಥಾನಕ್ಕೆ ಹೋಗಲು ಅಡ್ಡಿ ಆತಂಕ ಇಲ್ಲ. ಸಾಮರ್ಥ್ಯ, ಪ್ರತಿಭೆ ಇದ್ದವರಿಗೆ ಅವಕಾಶಗಳು ಸಿಗುತ್ತಿವೆ. ಈ ಪ್ರಮಾಣ ಇನ್ನಷ್ಟು ಹೆಚ್ಚಬೇಕು ಎಂಬು ದರಲ್ಲಿ ಎರಡು ಮಾತಿಲ್ಲ. ಕುಟುಂಬದ ಜತೆಗೆ ವೃತ್ತಿಯನ್ನು ಸವಾಲಾಗಿ ಸ್ವೀಕರಿಸುವ ನಾರಿಯರಿಗೆ ಹುದ್ದೆಗಳು ಕೈಬೀಸಿ ಕರೆಯುತ್ತವೆ. ಇಂಥವರಿಗೆ ಪುರಷರು ಕೂಡ ಸಾಥ್ ನೀಡಿದ್ದೇ ಆದಲ್ಲಿ ಮಹಿಳೆಯರ ಉನ್ನತ ಹುದ್ದೆಯ ಕನಸು ಈಡೇರುವುದು ಶಥಸಿದ್ಧ,'' ಎಂದು ಜಿಟಿ ಶಿಕ್ಷಣ ಸಮೂಹದ ನಿರ್ದೇಶಕ ಡಾ. ಬಿ.ಜಿ.ಸತ್ಯಪ್ರಸಾದ್ ವಿವರಿಸಿದರು.